ದಿನಾಂಕಃ 16-02-2021 ರಂದು ಸಾಕ್ಷಿಗೆ ಪ್ರಮಾಣ ವಚನ ಭೋದಿಸಲಾಯಿತು.

ಮುಂದುವರೆದ_ಪಾಟಿ_ಸವಾಲುಃ- ಪ್ರತಿವಾದಿ 14 ಮತ್ತು 16 ರ ಪರ ಶ್ರೀ ಎಫಎಸಕೆ ವಕೀಲರಿಂದ

ಅಬ್ದುಲಸತ್ತಾರ ಮತ್ತು ಅಬ್ದುಲಘಣಿ ಇವರ ಒಟ್ಟು ಘರಾಣೆಯ ಆಸ್ತಿಯಲ್ಲಿ 1992-93 ರಲ್ಲಿ ಹಿಸ್ಸೆ ದಿಸ್ಸೆ ಆಗಿರಬಹುದು. ಅಬ್ದುಲಸತ್ತಾರನಿಗೆ ರಿ ಸ ನಂ. 90/2 ಅ/1 ವಿಸ್ತೀರ್ಣ 2 ಎಕರೆಯ ಜಮೀನು, ರಿ ಸ ನಂ. 122/5 ವಿಸ್ತೀರ್ಣ 37 ಗುಂಟೆಯ ಜಮೀನು ಬಂದಿರುವುದು. ಅಬ್ದುಲಖಾದರನಿಗೆ ರಿ ಸ ನಂ. 74/3 ವಿಸ್ತೀರ್ಣ 2 ಎಕರೆ 34 ಗುಂಟೆ, ರಿ ಸ ನಂ. 122/8 ವಿಸ್ತೀರ್ಣ 1 ಎಕರೆ 10 ಗುಂಟೆ ಜಮೀನು ಬಂದಿರುವುದು. ಈ ಹಿಸ್ಸೆ ದಿಸ್ಸೆಯಾದ ವಾಟ್ನಿ ಕಾಗದಪತ್ರಗಳನ್ನು ನಾನು ನೋಡಿರುವೆನು ಆ ದಾಖಲೆಗಳನ್ನು ಈ ದಾವೆಯಲ್ಲಿ ಹಾಜರುಪಡಿಸಿರುವುದಿಲ್ಲ. ಈ ದಾಖಲಾತಿಯು ಅಬ್ದುಲಸತ್ತಾರನ ಹತ್ತಿರ ಇರುವುದನ್ನು ನೋಡಿರುವೆನು. ಈ ದಾಖಲಾತಿಯನ್ನು ಹಾಜರುಪಡಿಸುವಂತೆ ಅಬ್ದುಲಸತ್ತಾರ ಹಾಗೂ ಆತನ ಕುಟುಂಬದವರಿಗೆ ವಿಚಾರಿಸಿರುವುದಿಲ್ಲ.

ಪ್ರತಿವಾದಿ 9, 15 ಮತ್ತು 16 ರವರಿಗೆ ಪಾಲು ವಿಭಾಗದ ಸಮಯದಲ್ಲಿ ಯಾವುದೇ ಆಸ್ತಿಗಳನ್ನು ನೀಡಿರುವುದಿಲ್ಲ. ಇವರ ಕುಟುಂಬದ ಹೆಸರಿನಲ್ಲಿ ಮನೆ ಮತ್ತು ಬಯಲು ಜಾಗೆ ಇರುವುದು ಅಂದರೆ ಸರಿ. ಅಬ್ದುಲಸತ್ತಾರ ಮತ್ತು ಆತನ ಸಹೋದರಿಯರ ಮಧ್ಯೆ ಯಾವುದೇ ರೀತಿಯಾದ ಪಾಲು ವಿಭಾಗ ಆಗಿರುವುದಿಲ್ಲ ಇವತ್ತಿನವರೆಗೂ ಅವರು ಕೂಡಿಯೇ ವಾಸವಾಗಿರುವರು ಅಂದರೆ ಸರಿಯಲ್ಲ. ಪ್ರತಿವಾದಿ 1 ನನ್ನ ಸಹೋದರಿಯಾಗಬೇಕು ಅಂದರೆ ಸರಿ. ಇವಳನ್ನು ಅಬ್ದುಲಸತ್ತಾರನ

ಸಹೋದರನಾದ ಅಬ್ದುಲಘಣಿಯ ಜೊತೆ ವಿವಾಹ ಮಾಡಿಕೊಟ್ಟಿರುವರು ಅಂದರೆ ಸರಿ. ಈ ಕಾರಣಕ್ಕಾಗಿ ನಾನು ಅಬ್ದುಲಸತ್ತಾರ ಕುಟುಂಬದಲ್ಲಿ ಹಿಸ್ಸೆದಿಸ್ಸೆ ಆಗಿರುವುದಾಗಿ ಎಂದು ಸುಳ್ಳು ಹೇಳುತ್ತಿದ್ದೆನೆ ಅಂದರೆ ಸರಿಯಲ್ಲ.

ಕಬ್ಜಾರಹಿತ ಖರೀದಿ ಕರಾರುಪತ್ರವನ್ನು ಅಬ್ದುಲಸತ್ತಾರ ಎಂಬುವರು ಶಿಗ್ಗಾಂವದ ದಸ್ತೂರ ಬರಹಗಾರರಾದ ವೆಂಕಣ್ಣನ ಹತ್ತಿರ ಬರೆದುಕೊಂಡು ಬಂದಿರುವರು. ನಾನು ಆ ಸಮಯದಲ್ಲಿ ಶಿಗ್ಗಾಂವದ ಹೊಸಬಸನಿಲ್ದಾಣದ ಹತ್ತಿರ ಇರುವ ಶ್ರೀಕಾಂತ ಗೌಡರ ಎಂಬುವರ ಕಚೇರಿಯಲ್ಲಿ ಇದ್ದೆನು. ಈ ಖರೀದಿ ಕರಾರುಪತ್ರವನ್ನು ಬರೆಯಲು ಅದರ ಮಾಲೀಕನಾದ ಅಬ್ದುಲಸತ್ತಾರನೇ ಮಾಹಿತಿ ನೀಡಿರುವನು. ಈ ಖರೀದಿ ಕರಾರುಪತ್ರ ಬರೆಸಿಕೊಂಡು ಹೋದ ಸಮಯದಲ್ಲಿ ಕೇವಲ ಇಬ್ಬರು ಮಾತ್ರ ಇದ್ದರು ಅವರನ್ನು ಹೊರತುಪಡಿಸಿ ಬೇರೆ ಯಾರು ಇರಲಿಲ್ಲ. ಅದನ್ನು ಬರೆಸಿಕೊಂಡು ಬರಲು ಮದ್ಯಾಹ್ನ 12 ಗಂಟೆ ಸಮಯದಲ್ಲಿ ಹೋಗಿರುವರು. ಮರಳಿ ಅರ್ಧ ಗಂಟೆಯಲ್ಲಿ ಬಂದಿರುವರು.ಅವರು ಹೋಗುವ ಸಮಯದಲ್ಲಿ ಉತಾರ ತೆಗೆದುಕೊಂಡು ಹೋಗಿರುವರು. ಛಾಪಾಕಾಗದವನ್ನು ಖರೀದಿ ಮಾಡಿಕೊಂಡು ಅವರು ಹೋಗಿರುವರು. ಈ ಛಾಪಾಕಾಗದವನ್ನು ಯಾವ ಸಮಯಲ್ಲಿ ಖರೀದಿ ಮಾಡಿರುವರು ಎಂಬ ಬಗ್ಗೆ ನನಗೆ ಮಾಹಿತಿ ಇರುವುದಿಲ್ಲ. 6 ಲಕ್ಷ ರೂ.ಹಣವನ್ನು ಶ್ರೀಕಾಂತ ಗೌಡರು ಅಬ್ದುಲಸತ್ತಾರನಿಗೆ ನೀಡಿರುವರು. 500.00 ರೂ. ಮುಖಬೆಲೆಯ ನೋಟುಗಳನ್ನು ನೀಡಿರುವರು. ಒಟ್ಟು 10 ಲಕ್ಷದಾ 15 ಸಾವಿರ ರೂ.ಗಳನ್ನು ನೀಡಿರುವರು. ದಿಃ 16.05.2015 ರಂದು 6 ಲಕ್ಷ ರೂ. ಹಣವನ್ನು, ದಿಃ 19.03.2016 ರಂದು 15 ಸಾವಿರ ರೂ. ಹಣವನ್ನು, ದಿಃ 27.06.2016 ರಂದು 50 ಸಾವಿರ ರೂ.

ಹಣವನ್ನು, ದಿಃ 06.10.2016 ರಂದು 50 ಸಾವಿರ ರೂ. ಹಣವನ್ನು, ದಿಃ 02.08.2017 ರಂದು 3 ಲಕ್ಷ ರೂ.ಹಣವನ್ನು ಈ ರೀತಿಯಾಗಿ ನೀಡಿರುವರು. ಮೊದಲನೇ ಬಾರಿಗೆ ಹಣ ನೀಡಿದ ಬಗ್ಗೆ ಸಹಿ ಪಡೆದುಕೊಂಡಿದ್ದು, ನಂತರ ಉಳಿದ ಹಣ ನೀಡಿದ ಬಗ್ಗೆ ಅಬ್ದುಲಸತ್ತಾರನ ಕಡೆಯಿಂದ ಸಹಿ ಪಡೆದುಕೊಂಡಿರುವುದಿಲ್ಲ. ಅಬ್ದುಲಸತ್ತಾರ ಅನಾರೋಗ್ಯದಿಂದ ಬಳಲುತ್ತಿದ್ದು ಆತ ಕೈಗಳು ನಡಗುತ್ತಿರುವುದರಿಂದ ಆ ಕಾರಣಕ್ಕಾಗಿ ಉಳಿದ ಸಮಯದಲ್ಲಿ ನೀಡಿರುವ ಹಣದ ಬಗ್ಗೆ ಆತನ ಕಡೆಯಿಂದ ಸಹಿ ಪಡೆದುಕೊಂಡಿರುವುದಿಲ್ಲ. ಅಬ್ದುಲಸತ್ತಾರನ ಹೆಬ್ಬಟ್ಟಿಯ ಸಹಿಯನ್ನು ಪಡೆದುಕೊಳ್ಳಲು ಸಹ ಯಾವುದೇ ಪ್ರಯತ್ನ ಮಾಡಿರುವುದಿಲ್ಲ. ಅಬ್ದುಲಸತ್ತಾರ ಮೊದಲನೇ ಬಾರಿಗೆ ಸಹಿ ಮಾಡಿ ಹಣ ಪಡೆದುಕೊಂಡಿರುವುದರಿಂದ ನಂತರದ ಸಮಯದಲ್ಲಿ ಆತನ ಕೈ ನಡಗುತ್ತಿರುವುದರಿಂದ ಆ ಕಾರಣಕ್ಕಾಗಿ ಆತನ ಹೆಬ್ಬಟ್ಟಿನ ಸಹಿ ಪಡೆದುಕೊಂಡಿರುವುದಿಲ್ಲ.

ನಿಪಿ 2 ರ ದಾಖಲೆಯಲ್ಲಿ ದಿನಾಂಕ 19.03.2015, 27.06.2016, 06.10.2016 ಹಾಗೂ 02.08.2017 ರಂದು ಅಬ್ದುಲಸತ್ತಾರ ಬೇರೆ ಬೇರೆ ದಿನಾಂಕದಂದು ಹಣ ಪಡೆದುಕೊಂಡಿರುವುದಾಗಿ ಎಂದು ಬರೆದಿರುವಂತ ಬರಹವು ಒಂದೇ ಪೆನ್ನಿನ ಶಾಹಿಯಿಂದ ಬರೆದಿರುವಂತಹ ಬರಹವಾಗಿರುವುದು ಅಂದರೆ ಸರಿ. ಈ ಬರಹವನ್ನು ವೀರನಗೌಡ ಹೊನ್ನನಗೌಡರ ಬರೆದಿರುವರು. ಈ ಬರೆದಿರುವ ಪೆನ್ನನ್ನು ಈ ದಾವೆಯಲ್ಲಿ ಹಾಜರುಪಡಿಸಿರುವುದಿಲ್ಲ. ಆ ಪೆನ್ನನ್ನು ನೀಡುವಂತೆ ಶ್ರೀಕಾಂತಗೌಡರಿಗೆ ಕೇಳಿರುವುದಿಲ್ಲ. ನಿಪಿ 2 ರ ದಾಖಲೆ ಮೇಲೆ ಅಬ್ದುಲಸತ್ತಾರ ಎರಡು ಕಡೆ ಸಹಿ ಮಾಡಿರುವನು. ಈ ಎರಡು ಸಹಿಗಳು ಬೇರೆ ಬೇರೆ ಆಗಿರುವವು ಅಂದರೆ ಸರಿಯಲ್ಲ. ಈ ಸಹಿಗಳನ್ನು ನನ್ನ ಸಮಕ್ಷಮದಲ್ಲಿ ಆತ ಮಾಡಿರುವನು. ಈ ಎರಡೂ ಸಹಿಗಳನ್ನು ಬೇರೇ

ಬೇರೆ ಶಾಹಿಯಿಂದ ಮಾಡಿರುವಂತಹ ಸಹಿಗಳು ಆಗಿರುವವು ಅಂದರೆ ಸರಿಯಲ್ಲ.

ಈ ಖರೀದಿ ಸಂಚಕಾರ ಮಾಡುವ ಪೂರ್ವದಲ್ಲಿ ಅಬ್ದುಲಸತ್ತಾರನ ಸಹೋದರ ಮತ್ತು ಸಹೋದರಿಯರು ಹಾಜರು ಇರುವಂತೆ ಹೇಳಿದ್ದು, ಆದರೆ ಆ ಸಮಯದಲ್ಲಿ ಅಬ್ದುಲಸತ್ತಾರ ಈ ಆಸ್ತಿಯು ತನ್ನ ಸ್ವಂತ ಆಸ್ತಿಯಾಗಿರುವುದರಿಂದ ಅವರು ಅವಶ್ಯಕತೆ ಇರುವುದಿಲ್ಲ ಎಂದು ಹೇಳಿರುವನು. ಅಬ್ದುಲಸತ್ತಾರನ ಸಹೋದರಿಯರ ಸಹಿಗಳನ್ನು ಕಬ್ಜಾ ರಹಿತ ಖರೀದಿ ಕರಾರುಪತ್ರದ ಮೇಲೆ ಮಾಡಿಕೊಡುವಂತೆ ಕೇಳಿದ್ದು ಆಗ ಅಬ್ದುಲಸತ್ತಾರ ತನ್ನ ಸಹೋದರಿಯರ ಹಿಸ್ಸೆ ನೀಡಿರುವುದಾಗಿ ಎಂದು ಹೇಳಿರುವನು. ಅಬ್ದುಲಸತ್ತಾರನ ಹತ್ತಿರ ಕುಟುಂಬದ ಆಸ್ತಿಯಲ್ಲಿ ಹಿಸ್ಸೆದಿಸ್ಸೆ ಮಾಡಿಕೊಂಡ ಕಾಗದಪತ್ರ ಬಗ್ಗೆ ನಾನು ವಿಚಾರಿಸಿರುವುದಿಲ್ಲ.

ನಿಪಿ 2 ರ ದಾಖಲೆಯಲ್ಲಿ ಬರೆದಿರುವ ಷರತ್ತುಗಳ ಬಗ್ಗೆ ನನಗೆ ಮಾಹಿತಿ ಇರುವುದು. ಅಬ್ದುಲಸತ್ತಾರ ಆತ ಮಾನಸಿಕ ರೋಗದಿಂದ ಬಳಲುತ್ತಿದ್ದನು. ಆತ ಮೊದಲಿಗೆ ಧಾರವಾಡದ ಎಸಡಿಎಂ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದುಕೊಂಡಿದ್ದು, ನಂತರ ಶಿಗ್ಗಾಂವದ ಮೃತ್ಯುಂಜಯ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದುಕೊಂಡಿದ್ದು ನಂತರ ಆತ ಮೃತಪಟ್ಟಿರುವನು. ಎಸಡಿಎಂ ಆಸ್ಪತ್ರೆಯಲ್ಲಿ ಅಬ್ದುಲಸತ್ತಾರ ಚಿಕಿತ್ಸೆ ಪಡೆದುಕೊಂಡ ದಿನಾಂಕ, ತಿಂಗಳು ನನಗೆ ಹೇಳಲು ಆಗುವುದಿಲ್ಲ. ಮೃತ್ಯುಂಜಯ ಆಸ್ಪತ್ರೆಯಲ್ಲಿ ಜುಲೈ ತಿಂಗಳ 2017 ನೇ ಸಾಲಿನಲ್ಲಿ ಚಿಕಿತ್ಸೆ ಪಡೆದುಕೊಂಡಿರುವನು. ಈ ಆಸ್ಪತ್ರೆಯಲ್ಲಿ ಚಿಕಿತ್ಸೆ ಕೊಡಿಸಿದ ಬಗ್ಗೆ ದಾಖಲಾತಿಗಳನ್ನು ಹಾಜರುಪಡಿಸಿರುವುದಿಲ್ಲ. 15 ಸಾವಿರ ರೂ.ಹಣವನ್ನು ದಿಃ 19.03.2015 ರಂದು ಅಬ್ದುಲಸತ್ತಾರ ತನ್ನ ಖರ್ಚಗಾಗಿ ಪಡೆದುಕೊಂಡಿರುವನು. ದಿಃ 27.06.2016 ರಂದು 50 ಸಾವಿರ ರೂ. ಹಣವನ್ನು ತನ್ನ

ಹೆಂಡತಿಯ ವೈದ್ಯಕೀಯ ಚಿಕಿತ್ಸೆಗಾಗಿ ಪಡೆದುಕೊಂಡಿರುವನು. ದಿಃ 06.10.2016 ರಂದು 50 ಸಾವಿರ ರೂ ಹಣವನ್ನು ಅಬ್ದುಲಸತ್ತಾರನ ವೈದ್ಯಕೀಯ ಚಿಕಿತ್ಸೆಗಾಗಿ ಪಡೆದುಕೊಂಡಿರುವರು. ದಿಃ 02.08.2017 ರಂದು ಅಬ್ದುಲಸತ್ತಾರನ ತಮ್ಮನ ಮಗಳ ವಿವಾಹದ ಖರ್ಚಗಾಗಿ ರೂ. 3 ಲಕ್ಷ ಹಣವನ್ನು ಪಡೆದುಕೊಂಡಿರುವನು. ನಿಪಿ 2 ರ ದಾಖಲೆ ಮೇಲೆ ಅಬ್ದುಲಘಣಿಯ ಸಹಿಯನ್ನು ಪಡೆದುಕೊಂಡಿರುವುದಿಲ್ಲ. ಏಕೆಂದರೆ ಆತನಿಗೆ ಪಾಶುವಾಯು ರೋಗ ಬಂದಿರುವುದರಿಂದ. ನಿಪಿ 2 ರ ದಾಖಲೆ ಮೇಲೆ ಅಬ್ದುಲಸತ್ತಾರನ ಹೆಂಡತಿ, ಮಕ್ಕಳು ಹಾಗೂ ಇತರ ಸಂಬಂಧಿಗಳ ಸಹಿಗಳನ್ನು ಪಡೆದುಕೊಂಡಿರುವುದಿಲ್ಲ.

ಮುಂದಿನ ಪಾಟಿ ಸವಾಲಿಗೆ ಪ್ರಕರಣವನ್ನು ಮುಂದೂಡಲಾಯಿತು.

(ನನ್ನ ಸಮಕ್ಷಮ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ.ಹೆ.ಕೆ.ಸರಿ.ಇದೆ

ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ ಎಮ್ ಎಫ್ ಸಿ, ಶಿಗ್ಗಾಂವ.